ಅರಣ್ಯ ಪ್ರದೇಶ ಸೇರ್ಪಡೆ

2053 (2569); ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಇಲಾಖಾ ವ್ಯಾಪ್ತಿಗೆ ಎಷ್ಟು ಅರಣ್ಯ ಪ್ರದೇಶ ಸೇರ್ಪಟ್ಟಿದೆ; (ವಿವರ ನೀಡುವುದು)

ಆ) ಈ ಅರಣ್ಯ ಪ್ರದೇಶದಲ್ಲಿ ಎಷ್ಟು ಜನವಸತಿ ಪ್ರದೇಶಗಳು ಇವೆ;

ಇ) ಇಲಾಖಾ ವ್ಯಾಪ್ತಿಗೆ ಒಳಪಟ್ಟಿರುವ ಅರಣ್ಯ ಪ್ರದೇಶದಲ್ಲಿ ಎಷ್ಟು ಮ್ಯೂಟೇಶನ್ ಆಗಿದೆ; ಎಷ್ಟು ಇಲಾಖೆಯ ವಶದಲ್ಲಿದೆ? (ವಿವರ ನೀಡುವುದು)

ಶ್ರೀ ಬಿ. ರಮಾನಾಥ್ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಬೀದರ ಅರಣ್ಯ ವಿಭಾಗದಲ್ಲಿರುವ ಅರಣ್ಯ ಪ್ರದೇಶದ ವಿವರ ಈ ಕೆಳಗಿನಂತಿದೆ.

(ಹೆಕ್ಟೇರ್‌ಗಳಲ್ಲಿ)

ಕ್ರ ಸಂ	ತಾಲೂಕು	ಮೀಸಲು ಅರಣ್ಯ	Sec–4 &6	ರಕ್ಷಿತ ಅರಣ್ಯ	ವರ್ಗೀಕರಿಸಿದ ಅರಣ್ಯ	ಒಟ್ಟು
ಬೀದರ ಪ್ರಾದೇಶಿಕ ಅರಣ್ಯ ವಿಭಾಗ						
1	ಬೀದರ	2,024.840	3,018.350	208.430	3,198.620	8,450.240
	ಭಾಲ್ಕಿ	–	917.565	38.850	1,863.070	2,819.485
	ಔರಾದ	180.220	922.170	–	1,303.750	2,406.140
	ಬಸವ ಕಲ್ಯಾಣ	489.270	550.336	–	7,263.260	8,302.866
	ಹುಮನಾಬಾದ	1,825.310	4,811.300	1,571.840	7,085.463	15,293.913
	ಚಿಂಚೋಳಿ	705.410	1,327.040	–	4,302.007	6,334.457
		5,225.050	**11,546.761**	**1,819.120**	**25,016.170**	**43,607.101**

ಆ) ಅರಣ್ಯ ಪ್ರದೇಶದಲ್ಲಿ ಮೂರು ಜನ ವಸತಿ ಪ್ರದೇಶಗಳಿವೆ

1. ಹುಮನಾಬಾದ್ ವಲಯದ ಪೊಲಾಕಪಲ್ಲಿ ಗ್ರಾಮ
2. ಬೀದರ್ ವಲಯದ ಹೊನ್ನಡಿ ಗ್ರಾಮ
3. ಬೀದರ್‌ನ ವಲಯದ ಬೀದರ್ ಉತ್ತರ ಹೋಬಳಿಯ ಚಿಮಕೊಡ ಗ್ರಾಮ

ಇ) ಬೀದರ ಅರಣ್ಯ ವಿಭಾಗದಲ್ಲಿ ಈ ಕೆಳಗಿನಂತೆ ಮುಟೇಷನ್ ಆಗಿರುತ್ತದೆ.

ಕ್ರ. ಸಂ	ಒಟ್ಟು ಅರಣ್ಯ ಪ್ರದೇಶ (ಹೆ.)	ಮುಟೇಷನ್ ಆದ ಪ್ರದೇಶ (ಹೆ.)	ಬಾಕಿ ಇರುವ ಅರಣ್ಯ ಪ್ರದೇಶ (ಹೆ.)	ಷರಾ
1	43607.101	35205.55	8401.551	

94ಸಿ ಯೋಜನೆಯಡಿ ಸಲ್ಲಿಕೆಯಾದ ಫಲಾನುಭವಿಗಳ ಅರ್ಜಿ

2054 (2593); ಶ್ರೀ ಗೋಪಾಲ ಪೂಜಾರಿ ಕೆ.

ಅ) ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕಿನಲ್ಲಿ 94ಸಿ ಯೋಜನೆ ಅನ್ವಯ ಗ್ರಾಮಾಂತರ ಪ್ರದೇಶದಲ್ಲಿ ಹಕ್ಕುಪತ್ರಕ್ಕಾಗಿ ಬೇಡಿಕೆ ಅರ್ಜಿ ಸಲ್ಲಿಸಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ಗ್ರಾಮವಾರು ವಿವರ ನೀಡುವುದು)

ಆ) ಆ ಪೈಕಿ ಸ್ವೀಕೃತವಾದ ಮತ್ತು ತಿರಸ್ಕೃತವಾದ ಅರ್ಜಿಗಳ ಸಂಖ್ಯೆ ಎಷ್ಟು;

ಇ) ಪ್ರತಿಯೊಬ್ಬ ಫಲಾನುಭವಿಯ ಹಕ್ಕುಪತ್ರ ಪಡೆಯುವಾಗ ಸರ್ಕಾರಕ್ಕೆ ಪಾವತಿಸಬೇಕಾದ ಶುಲ್ಕ ಎಷ್ಟು; (ಸರ್ಕಾರದ ಅಧಿಸೂಚನೆ ಪ್ರತಿ ನೀಡುವುದು)

ಈ) ಹಕ್ಕುಪತ್ರ ವಿತರಿಸಲಾಗದ ಫಲಾನುಭವಿಗಳಿಗೆ ಯಾವಾಗ ಹಕ್ಕುಪತ್ರ ನೀಡಲಾಗುವುದು; ಈ ಬಗ್ಗೆ ಸರ್ಕಾರದ ಆದೇಶದಲ್ಲಿ ಯಾವ ಸೂಚನೆ ನೀಡಲಾಗಿದೆ? (ಇದಕ್ಕೆ ಸಂಬಂಧಪಟ್ಟ ಸರ್ಕಾರದ ಆದೇಶದ ಪ್ರತಿ ನೀಡುವುದು)